# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

| ಭಾಗ – ೪ಎ<br>Part – IVA | ಬೆಂಗಳೂರು, ಮಂಗಳವಾರ, ೧೨ ಆಗಸ್ಟ್, ೨೦೨೫ (ಶ್ರಾವಣ ೨೧, ಶಕವರ್ಷ ೧೯೪೭)<br>BENGALURU, TUESDAY, 12 AUGUST, 2025 (SHRAVANA 21, SHAKAVARSHA 1947) | ನಂ. ೪೫೨<br>No. 452 |
|---|---|---|


**ಕರ್ನಾಟಕ ವಿಧಾನಸಭೆ**

**ಹದಿನಾರನೇ ವಿಧಾನಸಭೆ**

**ಏಳನೇ ಅಧಿವೇಶನ**

## ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ವೈದ್ಯಾಧಿಕಾರಿಗಳು ಮತ್ತು ಇತರ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ) (ತಿದ್ದುಪಡಿ) ವಿಧೇಯಕ, 2025

**(2025ರ ವಿಧಾನಸಭೆಯ ವಿಧೇಯಕ ಸಂಖ್ಯೆ–28)**

ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ವೈದ್ಯಾಧಿಕಾರಿಗಳು ಮತ್ತು ಇತರ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ) ಅಧಿನಿಯಮ, 2011ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ವೈದ್ಯಾಧಿಕಾರಿಗಳು ಮತ್ತು ಇತರ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ) ಅಧಿನಿಯಮ, 2011 (2011ರ ಕರ್ನಾಟಕ ಅಧಿನಿಯಮ 2)ನ್ನು, ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತಾರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ವೈದ್ಯಾಧಿಕಾರಿಗಳು ಮತ್ತು ಇತರ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ) (ತಿದ್ದುಪಡಿ) ಅಧಿನಿಯಮ, 2025 ಎಂದು ಕರೆಯತಕ್ಕದ್ದು.

(2) ಇದು 2025ರ ಮೇ 27ನೇ ದಿನಾಂಕದಂದು ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

**2. ಪ್ರಕರಣ 2ರ ತಿದ್ದುಪಡಿ.-** ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ವೈದ್ಯಾಧಿಕಾರಿಗಳು ಮತ್ತು ಇತರ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ) ಅಧಿನಿಯಮ, 2011 (2011ರ ಕರ್ನಾಟಕ ಅಧಿನಿಯಮ 2)ನ್ನು (ಇಲ್ಲಿ ಇನ್ನುಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) 2ನೇ ಪ್ರಕರಣದಲ್ಲಿ,-

(i) ಈಗಾಗಲೇ ಇರುವ (ಎ) ಖಂಡವನ್ನು (ಎಎ) ಎಂಬುದಾಗಿ ಮರುಸಂಖ್ಯೆ ನೀಡತಕ್ಕದ್ದು;

(ii) ಹಾಗೆ ಮರುಸಂಖ್ಯೆ ನೀಡಲಾದ (ಎಎ) ಖಂಡಕ್ಕೆ ಮೊದಲು ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(ಎ) "ಆಡಳಿತಾತ್ಮಕ ಹುದ್ದೆಗಳು" ಎಂದರೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ, ಜಿಲ್ಲಾ ಶಸ್ತ್ರ ಚಿಕಿತ್ಸಕ, ತರಬೇತಿ ಸಂಸ್ಥೆಗಳ ಪ್ರಾಂಶುಪಾಲ, ಜಂಟಿ ನಿರ್ದೇಶಕ, ಉಪ ನಿರ್ದೇಶಕ, ಜಿಲ್ಲಾ ಮಟ್ಟದ ಕಾರ್ಯಕ್ರಮ ಅಧಿಕಾರಿ ಮತ್ತು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ದೊಡ್ಡ ಆಸ್ಪತ್ರೆಗಳ ಅಧೀಕ್ಷಕ ಹಾಗೂ ಆಯುಷ್ ಉಪ ನಿರ್ದೇಶಕ ಮತ್ತು ಜಿಲ್ಲಾ ಆಯುಷ್ ಆರೋಗ್ಯಾಧಿಕಾರಿ ಎಂಬುದಾಗಿ ಗುರುತಿಸಲಾದ ಹುದ್ದೆಗಳು;";

(iii) (ಸಿ) ಖಂಡಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(ಸಿ) "ಸಕ್ಷಮ ಪ್ರಾಧಿಕಾರಿ" ಎಂದರೆ ಆರೋಗ್ಯ ಅಧಿಕಾರಿಗಳು ಅಥವಾ ಇತರ ಸಿಬ್ಬಂದಿಗಳ ವರ್ಗಾವಣೆಯ ಆದೇಶಗಳನ್ನು ಮಾಡಲು ಸಕ್ಷಮವೆಂದು ನಿಯಮಿಸಬಹುದಾದ ಅಂಥ ಪ್ರಾಧಿಕಾರಿ;

(iv) ಹಾಗೆ ಪ್ರತಿಯೋಜಿಸಲಾದ (ಸಿ) ಖಂಡದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(ಸಿಸಿ) "ಮಹತ್ವದ ಖಾಲಿಹುದ್ದೆ" ಎಂದರೆ ನಿಯಮಿಸಬಹುದಾದ ಅಂಥ ಹುದ್ದೆಗಳ ಖಾಲಿ ಸ್ಥಾನಗಳು";

(v) (ಎಫ್) ಖಂಡದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(ಎಫ್‌ಎಫ್) "ಗ್ರೇಟರ್ ಬೆಂಗಳೂರು ಪ್ರದೇಶ" ಎಂದರೆ ಗ್ರೇಟರ್ ಬೆಂಗಳೂರು ಆಡಳಿತ ಅಧಿನಿಯಮ, 2024 (2025ರ ಕರ್ನಾಟಕ ಅಧಿನಿಯಮ 36)ರಡಿ ರಚಿಸಲಾದ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಪರಿಮಿತಿಗಳಲ್ಲಿ ಬರುವ ಪ್ರದೇಶಗಳು";

(vi) (ಜೆ) ಖಂಡದಲ್ಲಿ "ನಿರ್ದಿಷ್ಟ ಅವಧಿಗಾಗಿ ಸೃಜಿಸಿದ" ಎಂಬ ಪದಗಳ ತರುವಾಯ "ಅಧಿಸೂಚನೆಯ ಮೂಲಕ ಸರ್ಕಾರವು ಹಾಗೆಂದು ಗುರುತಿಸಲಾದ" ಎಂಬ ಪದಗಳನ್ನು ಸೇರಿಸತಕ್ಕದ್ದು;

(vii) (ಎಂ) ಖಂಡದಲ್ಲಿ "ಹಿರಿಯ ವಿಶೇಷಜ್ಞನಾಗಿ ಕಾರ್ಯ ನಿರ್ವಹಿಸುತ್ತಿರುವ" ಎಂಬ ಪದಗಳ ಬದಲಿಗೆ "ಹಿರಿಯ ವಿಶೇಷಜ್ಞ ವೃಂದದಲ್ಲಿ ಕಾರ್ಯ ನಿರ್ವಹಿಸುತ್ತಿರುವ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(viii) (ಎನ್) ಖಂಡದಲ್ಲಿ "ವಿಶೇಷಜ್ಞನಾಗಿ ಕಾರ್ಯ ನಿರ್ವಹಿಸುತ್ತಿರುವ" ಎಂಬ ಪದಗಳ ಬದಲಿಗೆ "ವಿಶೇಷಜ್ಞ ವೃಂದದಲ್ಲಿ ಕಾರ್ಯ ನಿರ್ವಹಿಸುತ್ತಿರುವ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ix) (ಎನ್) ಖಂಡದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(ಎನ್‌ಎನ್) "ವ್ಯಕ್ತಿಗಳ ವಿಶೇಷ ಪ್ರವರ್ಗ" ಎಂದರೆ ನಿಯಮಿಸಬಹುದಾದ ಅಂಥ ವಿಶೇಷ ಪ್ರವರ್ಗಗಳಿಗೆ ಸೇರಿದ ವ್ಯಕ್ತಿಗಳು."; ಮತ್ತು

(x) (ಕ್ಯೂ) ಖಂಡದಲ್ಲಿ, "ಜಿಲ್ಲಾ ಕೇಂದ್ರದಲ್ಲಿರುವ" ಎಂಬ ಪದಗಳಿಗೆ ಮೊದಲು "ಗ್ರೇಟರ್ ಬೆಂಗಳೂರು ಪ್ರದೇಶವನ್ನು ಹೊರತುಪಡಿಸಿ" ಎಂಬ ಪದಗಳನ್ನು ಸೇರಿಸತಕ್ಕದ್ದು.

**3. ಪ್ರಕರಣ 3ರ ಪ್ರತಿಯೋಜನೆ.-** ಮೂಲ ಅಧಿನಿಯಮದ 3ನೇ ಪ್ರಕರಣದ ಬದಲಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"**3. ಕೌನ್ಸಿಲಿಂಗ್ ಮೂಲಕ ವರ್ಗಾವಣೆ ಅಥವಾ ಬಡ್ತಿ.-** ಈ ಅಧಿನಿಯಮದಡಿಯಲ್ಲಿ ವೈದ್ಯಾಧಿಕಾರಿ ಅಥವಾ ಇತರ ಸಿಬ್ಬಂದಿಯ ಆರಂಭಿಕ ನೇಮಕಾತಿ, ವರ್ಗಾವಣೆ ಅಥವಾ ಮುಂಬಡ್ತಿಯನ್ನು ನಿಯಮಿಸಬಹುದಾದಂಥ ವಿಧಾನದಲ್ಲಿ ನಡೆಸುವ ಕೌನ್ಸಿಲಿಂಗ್ ಪ್ರಕ್ರಿಯೆ ಮೂಲಕ ಮಾಡತಕ್ಕದ್ದು:

ಪರಂತು ಕೌನ್ಸಿಲಿಂಗ್ ಪ್ರಕ್ರಿಯೆ ಮೂಲಕ ವರ್ಗಾವಣೆಗಳಿಗೆ ಸಂಬಂಧಿಸಿದ ಉಪಬಂಧಗಳು, ಪ್ರಾಜೆಕ್ಟ್ ಹುದ್ದೆಗಳು ಮತ್ತು ಆಡಳಿತಾತ್ಮಕ ಹುದ್ದೆಗಳೆಂದು ಗುರುತಿಸಲಾದ ಹುದ್ದೆಗಳಿಗೆ ಅನ್ವಯಿಸತಕ್ಕದ್ದಲ್ಲ:

ಮತ್ತು ಪರಂತು ಪ್ರಾಜೆಕ್ಟ್ ಮತ್ತು ಆಡಳಿತಾತ್ಮಕ ಹುದ್ದೆಗಳ ಆಯ್ಕೆ ಮತ್ತು ಸ್ಥಳನಿಯುಕ್ತಿಯ ಮಾನದಂಡ ಮತ್ತು ವಿಧಾನವು ನಿಯಮಿಸಬಹುದಾದಂತಿರತಕ್ಕದ್ದು."

**4. ಪ್ರಕರಣ 4ರ ತಿದ್ದುಪಡಿ.-** ಮೂಲ ಅಧಿನಿಯಮದ 4ನೇ ಪ್ರಕರಣದಲ್ಲಿ, ಪರಂತುಕವನ್ನು ಹೊರತುಪಡಿಸಿ (2)ನೇ ಉಪ-ಪ್ರಕರಣದ ಬದಲಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(2) ಗ್ರಾಮೀಣ ಪ್ರದೇಶದಲ್ಲಿ ನಿಯಮಿಸಲಾದಷ್ಟು ವರ್ಷಗಳ ಸೇವೆಯನ್ನು ಸಲ್ಲಿಸದಿರುವ ವೈದ್ಯಾಧಿಕಾರಿ ಅಥವಾ ಇತರ ಸಿಬ್ಬಂದಿಯನ್ನು ಗ್ರಾಮೀಣ ಪ್ರದೇಶದಲ್ಲಿನ ಹುದ್ದೆಗೆ ವರ್ಗಾಯಿಸತಕ್ಕದ್ದು."

**5. ಪ್ರಕರಣ 5ರ ತಿದ್ದುಪಡಿ.-** ಮೂಲ ಅಧಿನಿಯಮದ 5ನೇ ಪ್ರಕರಣದಲ್ಲಿ, (2)ನೇ ಉಪ-ಪ್ರಕರಣ ಮತ್ತು ಅದಕ್ಕೆ ಸಂಬಂಧಿಸಿದ ನಮೂದುಗಳ ಬದಲಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(2) ವಿಶೇಷಜ್ಞರು ಅಥವಾ ಹಿರಿಯ ವಿಶೇಷಜ್ಞರು ಹೊಂದಿರುವಂಥ ಸ್ನಾತಕೋತ್ತರ ಪದವಿ ಅಥವಾ ಸ್ನಾತಕೋತ್ತರ ಡಿಪ್ಲೋಮಾದ ತಜ್ಞತೆಗೆ, ಗುರುತಿಸದಿರುವ ಅಂಥ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಂಥ ವಿಶೇಷಜ್ಞರು ಅಥವಾ ಹಿರಿಯ ವಿಶೇಷಜ್ಞರನ್ನು ಅವರುಗಳು ಹೊಂದಿರುವ ವಿಶೇಷ ವಿದ್ಯಾರ್ಹತೆಗೆ ಸಂಬಂಧಿಸಿದಂತೆ ಗುರುತಿಸಲಾದ ಹುದ್ದೆಗೆ ವರ್ಗಾವಣೆ ಮಾಡತಕ್ಕದ್ದು:

ಪರಂತು ವಿಶೇಷಜ್ಞರು ಮತ್ತು ಹಿರಿಯ ವಿಶೇಷಜ್ಞರನ್ನು ಪ್ರಾಜೆಕ್ಟ್ ಹುದ್ದೆಗಳು ಮತ್ತು ಆಡಳಿತಾತ್ಮಕ ಹುದ್ದೆಗಳಿಗೆ ನಿಯಮಿಸಬಹುದಾದಂಥ ವಿಧಾನದಲ್ಲಿ ಸ್ಥಳನಿಯುಕ್ತಿಗೊಳಿಸಬಹುದು."

**6. ಪ್ರಕರಣ 6ರ ಪ್ರತಿಯೋಜನೆ.-** ಮೂಲ ಅಧಿನಿಯಮದ 6ನೇ ಪ್ರಕರಣದ ಬದಲಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"**6. ಸಾರ್ವಜನಿಕ ಹಿತದೃಷ್ಟಿಯಿಂದ ವೈದ್ಯಾಧಿಕಾರಿ ಅಥವಾ ಇತರ ಸಿಬ್ಬಂದಿಯ ವರ್ಗಾವಣೆ.-** (1) ಸೇವೆಯಲ್ಲಿರುವ ಮತ್ತು ಗ್ರಾಮೀಣ ಪ್ರದೇಶ, ಎ, ಬಿ ವಲಯ, ಅಥವಾ ಗ್ರೇಟರ್ ಬೆಂಗಳೂರು ಪ್ರದೇಶದಲ್ಲಿನ ಸರ್ಕಾರಿ ಆಸ್ಪತ್ರೆ ಅಥವಾ ಸರ್ಕಾರಿ ಸಂಸ್ಥೆಯಲ್ಲಿ, ನಿಯಮಿಸಲಾದ ಸಂಖ್ಯೆಯ ನಿರಂತರ ಸೇವೆಯ ವರ್ಷಗಳನ್ನು ಪೂರೈಸಿರುವ ವೈದ್ಯಾಧಿಕಾರಿ ಅಥವಾ ಇತರ ಸಿಬ್ಬಂದಿಯನ್ನು, ಆ ಪ್ರದೇಶ ಅಥವಾ ಹುದ್ದೆಯಲ್ಲಿ ದೀರ್ಘಾವಧಿಯ ಸೇವೆ ಅಥವಾ ಸೇವಾವಧಿಯಲ್ಲಿರುವ ವ್ಯಕ್ತಿಗಳಿಗೆ ಆದ್ಯತೆಯನ್ನು ನೀಡುವ ಮೂಲಕ ಮತ್ತು

ನಿಯಮಿಸಬಹುದಾದ ಅಂಥ ಮಾನದಂಡಗಳು ಅಥವಾ ಮನ್ನಣೆಯನ್ನು (weightage) ಪರಿಗಣಿಸಿ, ಈ ಮುಂದಿನ ಕ್ರಮದಲ್ಲಿ, ಎಂದರೆ.-

(1) ಗ್ರಾಮೀಣ ಪ್ರದೇಶ;

(2) ನಗರ ಪ್ರದೇಶದಲ್ಲಿನ ವಲಯ-ಬಿ:

(3) ನಗರ ಪ್ರದೇಶದಲ್ಲಿನ ವಲಯ – ಎ; ಮತ್ತು

(4) ಗ್ರೇಟರ್ ಬೆಂಗಳೂರು ಪ್ರದೇಶ:

- ಇವುಗಳಲ್ಲಿ ಅದೇ ಪ್ರದೇಶದಲ್ಲಿನ ಮತ್ತೊಂದು ಸರ್ಕಾರಿ ಆಸ್ಪತ್ರೆ ಅಥವಾ ಸರ್ಕಾರಿ ಸಂಸ್ಥೆಗೆ ಅಥವಾ ಯಾವುದೇ ಇತರ ಪ್ರದೇಶ ಅಥವಾ ವಲಯಕ್ಕೆ ಕೌನ್ಸಿಲಿಂಗ್ ಪ್ರಕ್ರಿಯೆಯ ಮೂಲಕ ವರ್ಗಾಯಿಸಬಹುದು:

ಪರಂತು, ವರ್ಷಾವಧಿಯಲ್ಲಿ ಅಂಥ ವರ್ಗಾವಣೆಯ ಒಟ್ಟು ಸಂಖ್ಯೆಯು ಅದೇ ವೃಂದದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಂಖ್ಯಾಬಲದ "ಶೇಕಡಾ ಹದಿನೈದರಷ್ಟನ್ನು" ಮೀರತಕ್ಕದ್ದಲ್ಲ:

ಮತ್ತು ಪರಂತು ವಿಶೇಷ ಪ್ರವರ್ಗಗಳಿಗೆ ಸೇರಿದ ವ್ಯಕ್ತಿಗಳ ಸಂದರ್ಭದಲ್ಲಿ, ಸರ್ಕಾರವು ವರ್ಗಾವಣೆಗಾಗಿ ಪ್ರತ್ಯೇಕ ಷರತ್ತುಗಳು ಮತ್ತು ವಿನಾಯಿತಿಗಳನ್ನು ನಿಯಮಿಸಬಹುದು:

ಅಲ್ಲದೆ ಪರಂತು ಗ್ರೇಟರ್ ಬೆಂಗಳೂರು ಪ್ರದೇಶದಲ್ಲಿ ಸೇವೆ ಸಲ್ಲಿಸುತ್ತಿರುವ ವ್ಯಕ್ತಿಗಳಿಗಾಗಿ, ಗ್ರೇಟರ್ ಬೆಂಗಳೂರು ಪ್ರದೇಶದಲ್ಲಿನ ವಿವಿಧ ಹುದ್ದೆಗಳಲ್ಲಿ ವ್ಯಕ್ತಿಯು ಸಲ್ಲಿಸಿದ ಒಟ್ಟು ನಿರಂತರ ಸೇವೆಯನ್ನು, ಪ್ರಸ್ತುತ ಹುದ್ದೆಯಲ್ಲಿ ವ್ಯಕ್ತಿಯು ಸಲ್ಲಿಸಿದ ಒಟ್ಟು ನಿರಂತರ ಸೇವೆಗಿಂತ ಮಿಗಿಲಾಗಿ ಸೇವಾಕಾಲದ ಅವಧಿಯನ್ನು ಅಳೆಯುವ ಉದ್ದೇಶಕ್ಕಾಗಿ ಲೆಕ್ಕಹಾಕತಕ್ಕದ್ದು:

ಅಲ್ಲದೆ ಪರಂತು (1)ನೇ ಉಪ-ಪ್ರಕರಣದ ಅಡಿಯಲ್ಲಿ ಗ್ರೇಟರ್ ಬೆಂಗಳೂರು ಪ್ರದೇಶದಿಂದ ಹೊರಗಡೆಗೆ ವರ್ಗಾಯಿಸಲು ಅರ್ಹರಿರುವ ವ್ಯಕ್ತಿಗಳಿಗೆ ಕೌನ್ಸಿಲಿಂಗ್ ನಡೆಯುವಾಗ, ಗ್ರೇಟರ್ ಬೆಂಗಳೂರು ಪ್ರದೇಶದಲ್ಲಿನ ಖಾಲಿ ಹುದ್ದೆಗಳು ಲಭ್ಯವಾಗತಕ್ಕದ್ದಲ್ಲ.

(2) ವೈದ್ಯಾಧಿಕಾರಿ ಅಥವಾ ಇತರ ಸಿಬ್ಬಂದಿಯನ್ನು ಅಮಾನತ್ತಿನಿಂದ ಪೂರ್ವಪದವಿಗೆ ತರುವುದರ (reinstatement) ಮೇರೆಗೆ ಅಥವಾ ಶಿಸ್ತು ವಿಚಾರಣೆ ಬಾಕಿಯಿರಿಸಿದ ಅಮಾನತ್ತಿನ ಜಾಗಕ್ಕೆ ಪ್ರತಿಯಾಗಿ ಪ್ರಸ್ತುತ ಹುದ್ದೆಯಿಂದ ಬದಲಾಯಿಸುವ ಮೇರೆಗೆ ಸಕ್ಷಮ ಪ್ರಾಧಿಕಾರವು ಕೌನ್ಸಿಲಿಂಗ್ ಮೂಲಕ ವರ್ಷಾವಧಿಯ ಯಾವುದೇ ಸಮಯದಲ್ಲಿ ಸ್ಥಳನಿಯುಕ್ತಿಗೊಳಿಸತಕ್ಕದ್ದು, ಆದರೆ ಆತನನ್ನು ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ವಲಯಕ್ಕಿಂತ ಮೇಲಿನ ವಲಯಕ್ಕೆ ಸ್ಥಳನಿಯುಕ್ತಿಗೊಳಿಸತಕ್ಕದ್ದಲ್ಲ ಹಾಗೂ ಶಿಸ್ತು ಪ್ರಾಧಿಕಾರದ ಆದೇಶಗಳಲ್ಲಿ ನಿರ್ದಿಷ್ಟಪಡಿಸಿದ ಪ್ರದೇಶದೊಳಗೆ ಸ್ಥಳನಿಯುಕ್ತಿಯನ್ನು ನಿರ್ಬಂಧಿಸಬಹುದು.

(3) ಮಹತ್ವದ ಖಾಲಿಹುದ್ದೆಗಳನ್ನು ತುಂಬಲು ಸರ್ಕಾರವು ವೈದ್ಯಾಧಿಕಾರಿ ಅಥವಾ ಇತರ ಸಿಬ್ಬಂದಿಯನ್ನು ವರ್ಷಾವಧಿಯ ಯಾವುದೇ ಸಮಯದಲ್ಲಿ ಕೌನ್ಸಿಲಿಂಗ್ ಇಲ್ಲದೆ ಸ್ಥಳನಿಯುಕ್ತಿಗೊಳಿಸಬಹುದು:

ಪರಂತು ಸ್ಥಳನಿಯುಕ್ತಿಗೊಳಿಸಬೇಕಾದ ವೈದ್ಯಾಧಿಕಾರಿ ಅಥವಾ ಇತರ ಸಿಬ್ಬಂದಿಯು ನಿರ್ದಿಷ್ಟಪಡಿಸಿದ ವಿಶೇಷ ಪ್ರವರ್ಗಗಳ ವಿನಾಯಿತಿಗೊಳಪಟ್ಟು (1)ನೇ ಉಪ-ಪ್ರಕರಣದ ಅನುಸಾರ ಸಿದ್ಧಪಡಿಸಿದ ದೀರ್ಘಾವಧಿ ಸೇವಾ ವ್ಯಕ್ತಿಗಳ ಪಟ್ಟಿಯಲ್ಲಿ ಅತ್ಯಂತ ಜೇಷ್ಠರಾಗಿರತಕ್ಕದ್ದು."

**7. ಹೊಸ ಪ್ರಕರಣ 7ಎ ಸೇರ್ಪಡೆ.-** ಮೂಲ ಅಧಿನಿಯಮದ 7ನೇ ಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"**7ಎ. ಅಪೀಲು.-** ಸಕ್ಷಮ ಪ್ರಾಧಿಕಾರದ ಆದೇಶಗಳಿಂದ ಬಾಧಿತನಾದ ಯಾರೇ ವ್ಯಕ್ತಿಯು ಈ ಅಧಿನಿಯಮದ ಉಪಬಂಧಗಳಡಿಯಲ್ಲಿ ಸರ್ಕಾರಕ್ಕೆ ಅಪೀಲನ್ನು ಸಲ್ಲಿಸಬಹುದು ಮತ್ತು ಸರ್ಕಾರವು ನಿಯಮಿಸಬಹುದಾದಂಥ ವಿಧಾನದಲ್ಲಿ ಅದನ್ನು ವಿಲೇವಾರಿ ಮಾಡಬಹುದು."

**8. ನಿರಸನ ಮತ್ತು ಉಳಿಸುವಿಕೆಗಳು.-** (1) ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ವೈದ್ಯಾಧಿಕಾರಿಗಳು ಮತ್ತು ಇತರ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ) (ತಿದ್ದುಪಡಿ) ಅಧ್ಯಾದೇಶ, 2025 (2025ರ ಕರ್ನಾಟಕ ಅಧ್ಯಾದೇಶ ಸಂ.05)ನ್ನು ಈ ಮೂಲಕ ನಿರಸನಗೊಳಿಸಲಾಗಿದೆ.

(2) ಅಂಥ ನಿರಸನವು ಏನೇ ಒಳಗೊಂಡಿದ್ದರೂ ಬೆಂಗಳೂರು ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ವೈದ್ಯಾಧಿಕಾರಿಗಳು ಮತ್ತು ಇತರ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ) (ತಿದ್ದುಪಡಿ) ಅಧ್ಯಾದೇಶ, 2025 (2025ರ ಕರ್ನಾಟಕ ಅಧ್ಯಾದೇಶ ಸಂ.05)ರ ಅಡಿಯಲ್ಲಿ ತಿದ್ದುಪಡಿಯಾದಂತೆ ಏನೇ ಮಾಡಿದ್ದರೂ ಅಥವಾ ಯಾವುದೇ ಕ್ರಮವನ್ನು ಕೈಗೊಂಡಿದ್ದರೂ ಈ ಅಧಿನಿಯಮದ ಅಡಿಯಲ್ಲಿ ತಿದ್ದುಪಡಿಯಾದಂತೆ ಮೂಲ ಅಧಿನಿಯಮದಲ್ಲಿ ಮಾಡಲಾಗಿದೆ ಅಥವಾ ಕೈಗೊಳ್ಳಲಾಗಿದೆ ಎಂದು ಭಾವಿಸತಕ್ಕದ್ದು.

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ವೈದ್ಯಾಧಿಕಾರಿಗಳು ಮತ್ತು ಇತರ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ) ಅಧಿನಿಯಮ, 2011ನ್ನು ಈ ಮುಂದಿನವುಗಳಿಗಾಗಿ ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ,-

(ಎ) ಆಡಳಿತಾತ್ಮಕ ಹುದ್ದೆಗಳು, ಸಕ್ಷಮ ಪ್ರಾಧಿಕಾರಿ, ಮಹತ್ವದ ಖಾಲಿಹುದ್ದೆ, ಗ್ರೇಟರ್ ಬೆಂಗಳೂರು ಪ್ರದೇಶ, ವ್ಯಕ್ತಿಗಳ ವಿಶೇಷ ಪ್ರವರ್ಗ ಮುಂತಾದ ಪದಗಳ ಪರಿಭಾಷೆಗಳ ಹುದ್ದೆಗಳಿಗೆ ನಿಯುಕ್ತಿಗೊಳಿಸಲು ಸರ್ಕಾರವು ನಿಯಮಗಳನ್ನು ರಚಿಸಲು ಸಾಧ್ಯವಾಗಿಸುವುದು;

(ಬಿ) ಪ್ರಾಜೆಕ್ಟ್ ಹುದ್ದೆಗಳು ಮತ್ತು ಆಡಳಿತಾತ್ಮಕ ಹುದ್ದೆಗಳಿಗೆ ನಿಯುಕ್ತಿಗೊಳಿಸುವ ವಿಧಾನದ ಕುರಿತು ನಿಯಮಗಳನ್ನು ರಚಿಸುವುದು;

(ಸಿ) ಅಧಿನಿಯಮದಲ್ಲಿನ ಕೆಲವು ವ್ಯಯದ ಮತ್ತು ಅನಗತ್ಯ ಉಪಬಂಧಗಳನ್ನು ಬಿಟ್ಟುಬಿಡುವುದು;

(ಡಿ) ಈ ಅಧಿನಿಯಮದಡಿ ಸಕ್ಷಮ ಪ್ರಾಧಿಕಾರವು ಮಾಡಿದ ವರ್ಗಾವಣೆಯಿಂದ ಬಾಧಿತರಾದ ವ್ಯಕ್ತಿಗಳು ನಿರ್ದಿಷ್ಟಪಡಿಸಲಾದ ಪ್ರಾಧಿಕಾರಕ್ಕೆ ಅಪೀಲು ಹೋಗುವುದು; ಮತ್ತು

(ಇ) ಇತರೆ ಆನುಷಂಗಿಕ ತಿದ್ದುಪಡಿಗಳನ್ನು ಸಹ ಮಾಡುವುದು,

ವಿಷಯವು ತುರ್ತು ಸ್ವರೂಪದ್ದಾಗಿರುವುದರಿಂದ ಮತ್ತು ರಾಜ್ಯ ವಿಧಾನಮಂಡಲದ ಉಭಯ ಸದನಗಳು ಅಧಿವೇಶನದಲ್ಲಿಲ್ಲದಿರುವುದರಿಂದ, ಮೇಲಿನ ಉದ್ದೇಶವನ್ನು ಸಾಧಿಸಲು ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ವೈದ್ಯಾಧಿಕಾರಿಗಳು ಮತ್ತು ಇತರ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ) ಅಧ್ಯಾದೇಶ, 2025 (2025ರ ಕರ್ನಾಟಕ ಅಧ್ಯಾದೇಶ 05)ನ್ನು ಪ್ರಖ್ಯಾಪಿಸಲಾಗಿತ್ತು.

ಈ ವಿಧೇಯಕವು ಸದರಿ ಅಧ್ಯಾದೇಶದ ಬದಲಿ ವಿಧೇಯಕವಾಗಿದೆ.

ಆದ್ದರಿಂದ ಈ ವಿಧೇಯಕ.

## ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮದಿಂದಾಗಿ ಯಾವುದೇ ಹೆಚ್ಚಿನ ವೆಚ್ಚವು ಉಂಟಾಗುವುದಿಲ್ಲ.

## ಪ್ರತ್ಯಾಯೋಜಿತ ಶಾಸನ ರಚನಾಧಿಕಾರ ಕುರಿತು ಜ್ಞಾಪನ ಪತ್ರ

| | |
|---|---|
| **ಖಂಡ 2** : | (i) 2ನೇ ಪ್ರಕರಣದ ಖಂಡ (ಸಿ)ರ ಮೂಲಕ ಪ್ರತಿಯೋಜಿಸಲು ಉದ್ದೇಶಿಸಿರುವ (iii)ನೇ ಬಾಬುವು, ಅಂಥ ಪ್ರಾಧಿಕಾರವನ್ನು ಸಕ್ಷಮ ಪ್ರಾಧಿಕಾರವಾಗಿ ನಿಯಮಿಸುವ ಕುರಿತು ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ.<br>(ii) 2ನೇ ಪ್ರಕರಣದ ಖಂಡ (ಸಿಸಿ)ರ ಮೂಲಕ ಪ್ರತಿಯೋಜಿಸಲು ಉದ್ದೇಶಿಸಿರುವ (iv)ನೇ ಬಾಬುವು, ಅಂಥ ಹುದ್ದೆಗಳನ್ನು ಮಹತ್ವದ ಖಾಲಿಹುದ್ದೆಯಾಗಿಸುವ ಕುರಿತು ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ. |
| **ಖಂಡ 3** : | 3ನೇ ಪ್ರಕರಣದ ಮೂಲಕ ಪ್ರತಿಯೋಜಿಸಲು ಉದ್ದೇಶಿಸಿರುವ (3)ನೇ ಖಂಡವು ,-<br>(i) ಕೌನ್ಸಿಲಿಂಗ್ ನಡೆಸುವಂಥ ಪ್ರಕ್ರಿಯೆ ವಿಧಾನ ಕುರಿತು ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ.<br>(ii) ಎರಡನೇ ಪರಂತುಕವು, ಪ್ರಾಜೆಕ್ಟ್ ಮತ್ತು ಆಡಳಿತಾತ್ಮಕ ಹುದ್ದೆಗಳ ಆಯ್ಕೆ ಮತ್ತು ಸ್ಥಳನಿಯುಕ್ತಿಯ ಮಾನದಂಡ ಮತ್ತು ವಿಧಾನದ ಕುರಿತು ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ. |
| **ಖಂಡ 5** : | 5ನೇ ಪ್ರಕರಣದ ಮೂಲಕ ಪ್ರತಿಯೋಜಿಸಲು ಉದ್ದೇಶಿಸಿರುವ (2)ನೇ ಉಪಪ್ರಕರಣವು, ವಿಶೇಷಜ್ಞ ಮತ್ತು ಹಿರಿಯ ವಿಶೇಷಜ್ಞರನ್ನು ನಿಯುಕ್ತಿಗೊಳಿಸಿಬಹುದಾದಂಥ ವಿಧಾನದ ಕುರಿತು ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ. |
| **ಖಂಡ 6** : | ಪ್ರತಿಯೋಜಿಸಲು ಉದ್ದೇಶಿಸಿರುವ 6ನೇ ಪ್ರಕರಣವು ಕೌನ್ಸಿಲಿಂಗ್ ಮೂಲಕ ವರ್ಗಾವಣೆಯನ್ನು ಪರಿಗಣಿಸಲು ಅಂಥ ಮಾನದಂಡಗಳು ಅಥವಾ ಮನ್ನಣೆಯ(weightage) ಕುರಿತು ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ. |

| | |
|---|---|
| **ಖಂಡ 7** : | ಪ್ರತಿಯೋಜಿಸಲು ಉದ್ದೇಶಿಸಿರುವ 7ನೇ ಪ್ರಕರಣವು ಅಪೀಲುಗಳನ್ನು ನಿರ್ದಿಷ್ಟಪಡಿಸಿದ ಪ್ರಾಧಿಕಾರವು ವಿಲೇವಾರಿ ಮಾಡಬಹುದಾದಂಥ ವಿಧಾನದ ಕುರಿತು ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ. |

ಪ್ರಸ್ತಾವಿತ ಶಾಸನ ರಚನಾಧಿಕಾರದ ಪ್ರತ್ಯಾಯೋಜನೆಯು ವಾಡಿಕೆಯ ಸ್ವರೂಪದ್ದಾಗಿದೆ.

**ದಿನೇಶ್ ಗುಂಡೂರಾವ್**
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿ

**ಎಂ.ಕೆ. ವಿಶಾಲಾಕ್ಷಿ**
ಕಾರ್ಯದರ್ಶಿ
ಕರ್ನಾಟಕ ವಿಧಾನಸಭೆ

**ಕರ್ನಾಟಕ ವಿಧಾನ ಸಭೆಯ ಕಾರ್ಯ ವಿಧಾನ ಮತ್ತು ನಡವಳಿಕೆ ನಿಯಮಗಳ 80ನೇ ನಿಯಮದ (1)ನೇ ಉಪನಿಯಮದ ಮೂಲಕ ಅಗತ್ಯಪಡಿಸಲಾದಂತೆ ವಿವರಣಾತ್ಮಕ ಹೇಳಿಕೆ.**

ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ವೈದ್ಯಾಧಿಕಾರಿಗಳು ಮತ್ತು ಇತರ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ) ಅಧಿನಿಯಮ, 2011ನ್ನು ಈ ಮುಂದಿನವುಗಳಿಗಾಗಿ ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ,-

(ಎ) ಆಡಳಿತಾತ್ಮಕ ಹುದ್ದೆಗಳು, ಸಕ್ಷಮ ಪ್ರಾಧಿಕಾರಿ, ಮಹತ್ವದ ಖಾಲಿಹುದ್ದೆ, ಗ್ರೇಟರ್ ಬೆಂಗಳೂರು ಪ್ರದೇಶ, ವ್ಯಕ್ತಿಗಳ ವಿಶೇಷ ಪ್ರವರ್ಗ ಮುಂತಾದ ಪದಗಳ ಪರಿಭಾಷೆಗಳ ಹುದ್ದೆಗಳಿಗೆ ನಿಯುಕ್ತಿಗೊಳಿಸಲು ಸರ್ಕಾರವು ನಿಯಮಗಳನ್ನು ರಚಿಸಲು ಸಾಧ್ಯವಾಗಿಸುವುದು;

(ಬಿ) ಪ್ರಾಜೆಕ್ಟ್ ಹುದ್ದೆಗಳು ಮತ್ತು ಆಡಳಿತಾತ್ಮಕ ಹುದ್ದೆಗಳಿಗೆ ನಿಯುಕ್ತಿಗೊಳಿಸುವ ವಿಧಾನದ ಕುರಿತು ನಿಯಮಗಳನ್ನು ರಚಿಸುವುದು;

(ಸಿ) ಅಧಿನಿಯಮದಲ್ಲಿನ ಕೆಲವು ವ್ಯಯದ ಮತ್ತು ಅನಗತ್ಯ ಉಪಬಂಧಗಳನ್ನು ಬಿಟ್ಟುಬಿಡುವುದು;

(ಡಿ) ಈ ಅಧಿನಿಯಮದಡಿ ಸಕ್ಷಮ ಪ್ರಾಧಿಕಾರವು ಮಾಡಿದ ವರ್ಗಾವಣೆಯಿಂದ ಬಾಧಿತರಾದ ವ್ಯಕ್ತಿಗಳು ನಿರ್ದಿಷ್ಟಪಡಿಸಲಾದ ಪ್ರಾಧಿಕಾರಕ್ಕೆ ಅಪೀಲು ಹೋಗುವುದು; ಮತ್ತು

(ಇ) ಇತರೆ ಆನುಷಂಗಿಕ ತಿದ್ದುಪಡಿಗಳನ್ನು ಸಹ ಮಾಡುವುದು,

ವಿಷಯವು ತುರ್ತು ಸ್ವರೂಪದ್ದಾಗಿರುವುದರಿಂದ ಮತ್ತು ರಾಜ್ಯ ವಿಧಾನಮಂಡಲದ ಉಭಯ ಸದನಗಳು ಅಧಿವೇಶನದಲ್ಲಿಲ್ಲದಿರುವುದರಿಂದ, ಮೇಲಿನ ಉದ್ದೇಶವನ್ನು ಸಾಧಿಸಲು ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ವೈದ್ಯಾಧಿಕಾರಿಗಳು ಮತ್ತು ಇತರ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ) ಅಧ್ಯಾದೇಶ, 2025 (2025ರ ಕರ್ನಾಟಕ ಅಧ್ಯಾದೇಶ 05)ನ್ನು ಪ್ರಖ್ಯಾಪಿಸಲಾಗಿತ್ತು.

ಈ ವಿಧೇಯಕವು ಸದರಿ ಅಧ್ಯಾದೇಶದ ಬದಲಿ ವಿಧೇಯಕವಾಗಿದೆ.

## ಅನುಬಂಧ

## ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ವೈದ್ಯಾಧಿಕಾರಿಗಳು ಮತ್ತು ಇತರ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ) ಅಧಿನಿಯಮ, 2011 ಪ್ರಕರಣಗಳ ಪಟ್ಟಿ ರ ಉದ್ಧೃತ ಭಾಗ

**XXX XXX XXX**

**2.ಪರಿಭಾಷೆಗಳು.-** ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) "ನೇಮಕ" ಎಂದರೆ, ನೇರ ನೇಮಕಾತಿ ಮೂಲಕ ಅಥವಾ ವಿಲೀನಗೊಳಿಸುವ ಮೂಲಕ ಅಥವಾ ಬಡ್ತಿಯ ಮೂಲಕ ಅಥವಾ ವೃಂದ ಬದಲಾವಣೆಯ ಮೂಲಕ ಮಾಡಿದ ವೈದ್ಯಾಧಿಕಾರಿ ಅಥವಾ ಇತರ ಸಿಬ್ಬಂದಿಯ ನೇಮಕ;

(ಬಿ) "ನೇಮಕಾತಿ ಪ್ರಾಧಿಕಾರ" ಎಂದರೆ, ಸಂಬಂಧಿಸಿದ ವೃಂದಗಳಿಗೆ ನೇಮಕ ಮಾಡಲು ಸಕ್ಷಮವಾದ ಪ್ರಾಧಿಕಾರ;

(ಸಿ) "ಸಕ್ಷಮ ಪ್ರಾಧಿಕಾರ" ಎಂದರೆ, ವೈದ್ಯಾಧಿಕಾರಿ ಅಥವಾ ಇತರ ಸಿಬ್ಬಂದಿಯ ವರ್ಗಾವಣೆ ಆದೇಶಗಳನ್ನು ಹೊರಡಿಸಲು ಸಕ್ಷಮವಾದ ಪ್ರಾಧಿಕಾರ;

(ಡಿ) "ಸರ್ಕಾರ" ಎಂದರೆ, ಕರ್ನಾಟಕ ಸರ್ಕಾರ;

(ಇ) "ಸರ್ಕಾರಿ ಆಸ್ಪತ್ರೆ" ಎಂದರೆ ಜಿಲ್ಲಾ ಆಸ್ಪತ್ರೆಗಳು, ಇತರ ದೊಡ್ಡ ಆಸ್ಪತ್ರೆಗಳು, ನಗರ ಕುಟುಂಬ ಕಲ್ಯಾಣ ಕೇಂದ್ರ, ಮಹಿಳಾ ಮತ್ತು ಮಕ್ಕಳ ಆಸ್ಪತ್ರೆ, ತಾಲ್ಲೂಕು ಮಟ್ಟದಲ್ಲಿಯ ಸಾರ್ವಜನಿಕ ಆಸ್ಪತ್ರೆಗಳು, ಸಮುದಾಯ ಆರೋಗ್ಯ ಕೇಂದ್ರ, ನಗರ ಪ್ರಾಥಮಿಕ ಆರೋಗ್ಯ ಕೇಂದ್ರ, ಪ್ರಾಥಮಿಕ ಆರೋಗ್ಯ ಕೇಂದ್ರ, ಉಪ ಕೇಂದ್ರ, ಸಂಚಾರಿ ಆರೋಗ್ಯ ಘಟಕ, ಸಂಚಾರಿ ಟ್ರೈಬಲ್ ಘಟಕ, ಹೆರಿಗೆ ಕೇಂದ್ರ ಮತ್ತು ಆಯುಷ್ ಆಸ್ಪತ್ರೆ ಅಥವಾ ಸರ್ಕಾರದಿಂದ ಸ್ಥಾಪಿಸಲ್ಪಟ್ಟಿರುವ ಯಾವುದೇ ಹೆಸರಿನಿಂದ ಕರೆಯಲ್ಪಡುವ ಮತ್ತು ಯಾವುದೇ ವೈದ್ಯಕೀಯ ಪದ್ಧತಿಗೆ ಸಂಬಂಧಿಸಿದ ಯಾವುದೇ ಸಂಸ್ಥೆ, ಕೇಂದ್ರ ಅಥವಾ ಇತರ ಕೇಂದ್ರ ಇವುಗಳನ್ನು ಒಳಗೊಳ್ಳುತ್ತದೆ;

(ಎಫ್) "ಸರ್ಕಾರಿ ಸಂಸ್ಥೆ" ಎಂದರೆ ಮತ್ತು ಇದು ಒಂದು ತರಬೇತಿ ಕೇಂದ್ರ, ಒಂದು ಆಡಳಿತ ಕಚೇರಿ ಅಥವಾ ಯಾವುದೇ ವೈದ್ಯಕೀಯ ಪದ್ಧತಿಗೆ ಸಂಬಂಧಿಸಿದ, ರಾಜ್ಯ ಸರ್ಕಾರವು ಸ್ಥಾಪಿಸಿದ, ಮತ್ತು ಯಾವುದೇ ಹೆಸರಿನಿಂದ ಕರೆಯಲ್ಪಡುವ ಯಾವುದೇ ಇತರ ಸಂಸ್ಥೆಗಳು ಇವುಗಳನ್ನು ಒಳಗೊಳ್ಳುತ್ತದೆ;

(ಜಿ) "ವೈದ್ಯಾಧಿಕಾರಿ" ಎಂದರೆ, ಅನುಸೂಚಿ -I ರಲ್ಲಿ ನಿರ್ದಿಷ್ಟಪಡಿಸಿದ ಹುದ್ದೆಗಳ ಯಾವುದೇ ಪ್ರವರ್ಗಕ್ಕೆ ನೇಮಕಾತಿ ಪ್ರಾಧಿಕಾರವು ನೇಮಕ ಮಾಡಿದ ಒಬ್ಬ ವೈದ್ಯಾಧಿಕಾರಿ;

(ಎಚ್) "ಇತರ ಸಿಬ್ಬಂದಿ" ಎಂದರೆ, ಅನುಸೂಚಿ - II ರಲ್ಲಿ ನಿರ್ದಿಷ್ಟಪಡಿಸಿದ ಹುದ್ದೆಗಳ ಯಾವುದೇ ಪ್ರವರ್ಗಕ್ಕೆ ನೇಮಕಾತಿ ಪ್ರಾಧಿಕಾರವು ನೇಮಕ ಮಾಡಿದ ಒಬ್ಬ ವ್ಯಕ್ತಿ;

(ಐ) "ಕೌನ್ಸಿಲಿಂಗ್ ಪ್ರಕ್ರಿಯೆ" ಎಂದರೆ, ನೇಮಕಾತಿಗಾಗಿ ಅಥವಾ ವರ್ಗಾವಣೆಗಾಗಿ ಪರಿಗಣಿಸಿರುವ ವ್ಯಕ್ತಿಗೆ ಆತನು ಕೆಲಸ ಮಾಡಿದ ಸ್ಥಳ ಅಥವಾ ವಲಯದಲ್ಲಿ ಆತನು ಸಲ್ಲಿಸಿದ ಸೇವೆಯ ಅವಧಿಯ ಆಧಾರದ ಆದ್ಯತೆಯ ಮೇಲೆ ಮತ್ತು ನಿಯಮಿಸಬಹುದಾದ ಅಂಥ ಇತರ ಅರ್ಹತೆಯ ಮೇಲೆ, ಸ್ಥಳ ಅಥವಾ ಹುದ್ದೆಯನ್ನು ಆಯ್ಕೆ ಮಾಡಲು ಒಬ್ಬ ವ್ಯಕ್ತಿಗೆ ಅವಕಾಶವನ್ನು ನೀಡುವ ಪ್ರಕ್ರಿಯೆ;

(ಜೆ) "ಪ್ರಾಜೆಕ್ಟ್ ಹುದ್ದೆ" ಎಂದರೆ, ವಿದೇಶಿ ಏಜೆನ್ಸಿಯಾಗಲೀ ಅಥವಾ ಭಾರತ ಸರ್ಕಾರವಾಗಲೀ ನೀಡಿದ ನೆರವಿನ ಅಡಿಯಲ್ಲಿ ನಿರ್ದಿಷ್ಟ ಉದ್ದೇಶ ಮತ್ತು ನಿರ್ದಿಷ್ಟ ಅವಧಿಗಾಗಿ ಸೃಜಿಸಿದ ಒಂದು ಹುದ್ದೆ;

(ಕೆ) "ಗ್ರಾಮೀಣ ಪ್ರದೇಶ" ಎಂದರೆ, ನಗರ ಪ್ರದೇಶ ಆಗಿರದ ಒಂದು ಪ್ರದೇಶ;

(ಎಲ್) "ಅನುಸೂಚಿ" ಎಂದರೆ, ಈ ಅಧಿನಿಯಮಕ್ಕೆ ಲಗತ್ತಿಸಲಾದ ಅನುಸೂಚಿ;

(ಎಂ) "ಹಿರಿಯ ವಿಶೇಷಜ್ಞ" ಎಂದರೆ, ಸ್ನಾತಕೋತ್ತರ ಪದವಿ ಅಥವಾ ಸ್ನಾತಕೋತ್ತರ ಡಿಪ್ಲೊಮೊ ವಿದ್ಯಾರ್ಹತೆಯನ್ನು ಹೊಂದಿರುವ ಮತ್ತು ಹಿರಿಯ ವಿಶೇಷಜ್ಞನಾಗಿ ಕಾರ್ಯ ನಿರ್ವಹಿಸುತ್ತಿರುವ ಒಬ್ಬ ವೈದ್ಯಾಧಿಕಾರಿ;

(ಎನ್) "ವಿಶೇಷಜ್ಞ" ಎಂದರೆ, ಸ್ನಾತಕೋತ್ತರ ಪದವಿ ಅಥವಾ ಸ್ನಾತಕೋತ್ತರ ಡಿಪ್ಲೊಮೊ ವಿದ್ಯಾರ್ಹತೆಯನ್ನು ಹೊಂದಿರುವ ಮತ್ತು ವಿಶೇಷಜ್ಞನಾಗಿ ಕಾರ್ಯ ನಿರ್ವಹಿಸುತ್ತಿರುವ ಒಬ್ಬ ವೈದ್ಯಾಧಿಕಾರಿ;

(ಒ) "ವರ್ಗಾವಣೆ" ಎಂದರೆ, ವೈದ್ಯಾಧಿಕಾರಿ ಅಥವಾ ಇತರ ಸಿಬ್ಬಂದಿಯನ್ನು ಕೆಲಸದ ಒಂದು ಸ್ಥಳದಿಂದ ಇನ್ನೊಂದು ಕೆಲಸದ ಸ್ಥಳಕ್ಕೆ ನಿಯೋಜಿಸುವುದು;

(ಪಿ) "ನಗರ ಪ್ರದೇಶ" ಎಂದರೆ, ನಗರಪಾಲಿಕೆ, ನಗರಸಭೆ, ಪುರಸಭೆ, ಪಟ್ಟಣ ಪಂಚಾಯತಿ ಅಥವಾ ಕರ್ನಾಟಕ ಪೌರನಿಗಮಗಳ ಅಧಿನಿಯಮ, 1976 ಅಥವಾ ಕರ್ನಾಟಕ ಪೌರಸಭೆಗಳ ಅಧಿನಿಯಮ, 1964ರ ಅಡಿಯಲ್ಲಿ ನಿರ್ದಿಷ್ಟಪಡಿಸಿದ ಇತರ ಅಧಿಸೂಚಿತ ಪ್ರದೇಶಗಳ ಮಿತಿಗಳೊಳಗೆ ಇರುವ ಯಾವುದೇ ಪ್ರದೇಶ ಮತ್ತು ಸರ್ಕಾರವು ಕಾಲಕಾಲಕ್ಕೆ ಅಧಿಸೂಚಿಸಬಹುದಾದ ಮೇಲೆ ಅಧಿಸೂಚಿಸಿದ ಪ್ರದೇಶಗಳ ಪರಿಮಿತಿಗಳಿಂದ ಅಂಥ ದೂರದವರೆಗೆ ಇರುವ ಪ್ರದೇಶ;

(ಕ್ಯೂ) "ವಲಯ - ಎ" ಎಂದರೆ, ಜಿಲ್ಲಾ ಕೇಂದ್ರಗಳಲ್ಲಿರುವ ನಗರಸಭೆ ಅಥವಾ ಪುರಸಭೆಯ ಪರಿಮಿತಿಯೊಳಗೆ ಬರುವ ಪ್ರದೇಶ;

(ಆರ್) "ವಲಯ - ಬಿ" ಎಂದರೆ, ಜಿಲ್ಲಾ ಕೇಂದ್ರಗಳಲ್ಲಿರುವ ನಗರಸಭೆಯನ್ನು ಹೊರತುಪಡಿಸಿ ಇತರ ನಗರಸಭೆ, ಪಟ್ಟಣ ಪುರಸಭೆಗಳ ಅಥವಾ ಪಟ್ಟಣ ಪಂಚಾಯತಿಯ ಪರಿಮಿತಿಯೊಳಗೆ ಬರುವ ನಗರ ಪ್ರದೇಶ ಮತ್ತು ನಗರ ಪ್ರದೇಶಗಳೆಂದು ಅಧಿಸೂಚಿಸಿದ ಪ್ರದೇಶಗಳು;

**XXX XXX XXX**

**3. ಕೌನ್ಸಿಲಿಂಗ್ ಮೂಲಕ ವರ್ಗಾವಣೆ ಅಥವಾ ಬಡ್ತಿ.-** ಈ ಅಧಿನಿಯಮದಡಿಯಲ್ಲಿ ವೈದ್ಯಾಧಿಕಾರಿಗಳು ಅಥವಾ ಇತರ ಸಿಬ್ಬಂದಿಯ ವರ್ಗಾವಣೆ ಅಥವಾ ಬಡ್ತಿಯನ್ನು ನಿಯಮಿಸಬಹುದಾದಂಥ ವಿಧಾನದಲ್ಲಿ ನಡೆಸುವ ಕೌನ್ಸಿಲಿಂಗ್ ಪ್ರಕ್ರಿಯೆಯ ಮೂಲಕ ಮಾಡತಕ್ಕದ್ದು:

ಪರಂತು, ಕೌನ್ಸಿಲಿಂಗ್‌ನ ಪ್ರಕ್ರಿಯೆಯ ಮೂಲಕ ಮಾಡುವ ವರ್ಗಾವಣೆಗಳಿಗೆ ಸಂಬಂಧಿಸಿದ ಉಪಬಂಧಗಳು, ಪ್ರಾಜೆಕ್ಟ್ ಹುದ್ದೆಗಳೆಂದು ಗುರುತಿಸಲ್ಪಡುವ ಹುದ್ದೆಗಳಿಗೆ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು, ಜಿಲ್ಲಾ ಶಸ್ತ್ರಚಿಕಿತ್ಸಕ, ತರಬೇತಿ ಸಂಸ್ಥೆಯ ಪ್ರಾಂಶುಪಾಲರು, ಜಂಟಿ ನಿರ್ದೇಶಕರು, ಉಪ ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ದೊಡ್ಡ ಆಸ್ಪತ್ರೆಗಳ ಅಧೀಕ್ಷಕರುಗಳ, ಜಿಲ್ಲಾ ಆಯುಷ್ ಅಧಿಕಾರಿ ಹಾಗೂ ಆಯುಷ್ ಇಲಾಖೆಯ ಉಪ ನಿರ್ದೇಶಕರುಗಳ ಹುದ್ದೆಗಳಿಗೆ ಅನ್ವಯವಾಗತಕ್ಕದ್ದಲ್ಲ.

**XXX XXX XXX**

**4. ಗ್ರಾಮೀಣ ಪ್ರದೇಶಗಳಲ್ಲಿ ವೈದ್ಯಾಧಿಕಾರಿಗಳು ಅಥವಾ ಇತರೆ ಸಿಬ್ಬಂದಿಗಳ ಕಡ್ಡಾಯ ನೇಮಕಾತಿ.-** (1) ನೇಮಕಾತಿ ಪ್ರಾಧಿಕಾರ ಅಥವಾ ಸಕ್ಷಮ ಪ್ರಾಧಿಕಾರವು, ಸರ್ಕಾರಿ ಆಸ್ಪತ್ರೆ ಅಥವಾ ಸರ್ಕಾರಿ ಸಂಸ್ಥೆಗೆ ವೈದ್ಯಾಧಿಕಾರಿ ಅಥವಾ ಇತರ ಸಿಬ್ಬಂದಿಯ ಪ್ರಾರಂಭಿಕ ನೇಮಕಾತಿ ಅಥವಾ ಬಡ್ತಿಯ ಸಂದರ್ಭದಲ್ಲಿ, ಗ್ರಾಮೀಣ ಪ್ರದೇಶಗಳಲ್ಲಿನ ಖಾಲಿ ಸ್ಥಾನಗಳು ಭರ್ತಿ ಮಾಡುವುದನ್ನು ಮೊದಲು ಖಚಿತಪಡಿಸಿಕೊಳ್ಳತಕ್ಕದ್ದು.

(2) ಈ ಅಧಿನಿಯಮದ ಪ್ರಾರಂಭದ ದಿನಾಂಕದಂದು ಸೇವೆಯಲ್ಲಿದ್ದಂಥ ಮತ್ತು ಈ ಅಧಿನಿಯಮವು ಪ್ರಾರಂಭವಾದ ದಿನಾಂಕಕ್ಕೆ ಮೊದಲು ಗ್ರಾಮೀಣ ಪ್ರದೇಶಗಳಲ್ಲಿ

ನಿಯಮಿಸಲಾದಷ್ಟು ವರ್ಷಗಳು ಸೇವೆ ಸಲ್ಲಿಸದಿರುವ ವೈದ್ಯಾಧಿಕಾರಿ ಅಥವಾ ಇತರ ಸಿಬ್ಬಂದಿಯನ್ನು ಗ್ರಾಮೀಣ ಪ್ರದೇಶದಲ್ಲಿನ ಹುದ್ದೆಗೆ ವರ್ಗಾವಣೆ ಮಾಡತಕ್ಕದ್ದು:

ಪರಂತು, ಗ್ರಾಮೀಣ ಪ್ರದೇಶಕ್ಕೆ ವೈದ್ಯಾಧಿಕಾರಿ ಅಥವಾ ಇತರ ಸಿಬ್ಬಂದಿಯ ಕಡ್ಡಾಯ ವರ್ಗಾವಣೆಗೆ ಸಂಬಂಧಿಸಿದ ಉಪಬಂಧಗಳನ್ನು ಐವತ್ತು ವರ್ಷಗಳ ವಯಸ್ಸನ್ನು ಮೀರಿದ ವ್ಯಕ್ತಿಗಳಿಗೆ ಅನ್ವಯಿಸತಕ್ಕದ್ದಲ್ಲ.

(3) ಕಡ್ಡಾಯ ಗ್ರಾಮೀಣ ಸೇವೆಯನ್ನು ನಿಯಮಿಸಲಾದಂಥ ಹುದ್ದೆಯ ಸಂಬಂಧದಲ್ಲಿ ಪ್ರಾರಂಭಿಕ ನೇಮಕಾತಿ ಅಥವಾ ಬಡ್ತಿಗೆ ಯಾವುದೇ ಖಾಲಿ ಸ್ಥಾನವು ಲಭ್ಯವಾಗದಿದ್ದಲ್ಲಿ, ಗ್ರಾಮೀಣ ಸೇವೆಗೆ ನಿಯಮಿಸಲಾದಷ್ಟು ವರ್ಷಗಳನ್ನು ಪೂರ್ಣಗೊಳಿಸಿರುವಂಥ ವೈದ್ಯಾಧಿಕಾರಿ ಅಥವಾ ಇತರ ಸಿಬ್ಬಂದಿಯನ್ನು 'ಬಿ' ವಲಯದಲ್ಲಿನ ಮತ್ತೊಂದು ಸ್ಥಳಕ್ಕೆ ವರ್ಗಾವಣೆ ಮಾಡುವ ಮೂಲಕ ಹಾಗೂ ಬಿ ವಲಯದಲ್ಲಿ ಯಾವುದೇ ಖಾಲಿ ಸ್ಥಾನವು ಲಭ್ಯವಿಲ್ಲದಿದ್ದಲ್ಲಿ, ಬಿ ವಲಯದಲ್ಲಿ ದೀರ್ಘಕಾಲ ಸೇವೆ ಸಲ್ಲಿಸಿದಂಥ ವ್ಯಕ್ತಿಯನ್ನು ನಗರ ಪ್ರದೇಶದ ಎ ವಲಯಕ್ಕೆ ವರ್ಗಾವಣೆ ಮಾಡುವ ಮೂಲಕ ಖಾಲಿ ಸ್ಥಾನವನ್ನು ಸೃಜಿಸಬಹುದು.

**XXX XXX XXX**

**5. ಸೂಕ್ತ ಹುದ್ದೆಗೆ ವಿಶೇಷಜ್ಞರು ಅಥವಾ ಹಿರಿಯ ವಿಶೇಷಜ್ಞರ ಕಡ್ಡಾಯ ನೇಮಕಾತಿ ಅಥವಾ ವರ್ಗಾವಣೆ ಅಥವಾ ಬಡ್ತಿ.-** (1) ಸ್ನಾತಕೋತ್ತರ ಪದವಿ ಅಥವಾ ಡಿಪ್ಲೋಮಾ ಹೊಂದಿರುವ ವಿಶೇಷಜ್ಞ ಅಥವಾ ಹಿರಿಯ ವಿಶೇಷಜ್ಞರನ್ನು, ಸ್ನಾತಕೋತ್ತರ ಪದವಿ ಅಥವಾ ಸ್ನಾತಕೋತ್ತರ ಡಿಪ್ಲೋಮಾ ಹೊಂದಿರುವಂಥವನ ವಿಷಯಕ್ಕೆ ಅಥವಾ ತಜ್ಞತೆಗೆ ಸಂಬಂಧಿಸಿದ ಅಥವಾ ಅನುರೂಪವಾದ ವಿಶೇಷಜ್ಞರ ಹುದ್ದೆಯೆಂದು ಗುರುತಿಸದಿರುವಂಥ ಹುದ್ದೆಯಲ್ಲಿನ ಕಾರ್ಯಕ್ಕೆ ನಿಯೋಜಿಸತಕ್ಕದ್ದಲ್ಲ ಅಥವಾ ವರ್ಗಾವಣೆ ಮಾಡತಕ್ಕದ್ದಲ್ಲ.

(2) ಈ ಅಧಿನಿಯಮವು ಪ್ರಾರಂಭವಾದ ದಿನಾಂಕದಂದು ವಿಶೇಷಜ್ಞರು ಅಥವಾ ಹಿರಿಯ ವಿಶೇಷಜ್ಞರು ಹೊಂದಿರುವಂಥ ಸ್ನಾತಕೋತ್ತರ ಪದವಿ ಅಥವಾ ಸ್ನಾತಕೋತ್ತರ ಡಿಪ್ಲೋಮಾದ ತಜ್ಞತೆಗೆ, ಗುರುತಿಸದಿರುವಂಥ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವಂಥ ವಿಶೇಷಜ್ಞರು ಅಥವಾ ಹಿರಿಯ ವಿಶೇಷಜ್ಞರನ್ನು ಅವರುಗಳು ಹೊಂದಿರುವ ವಿಶೇಷ ವಿದ್ಯಾರ್ಹತೆಗೆ ಸಂಬಂಧಿಸಿದಂತೆ ಗುರುತಿಸಲಾದ ಹುದ್ದೆಗೆ ವರ್ಗಾವಣೆ ಮಾಡತಕ್ಕದ್ದು:

ಪರಂತು, ಈ ಪ್ರಕರಣದ ಉಪಬಂಧವನ್ನು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ, ಜಿಲ್ಲಾ ಶಸ್ತ ಚಿಕಿತ್ಸಕ, ತರಬೇತಿ ಸಂಸ್ಥೆಗಳ ಪ್ರಾಂಶುಪಾಲರು, ಜಂಟಿ ನಿರ್ದೇಶಕರು, ಉಪ ನಿರ್ದೇಶಕರು, ಜಿಲ್ಲಾ ಮಟ್ಟದ ಕಾರ್ಯಕ್ರಮ ಅಧಿಕಾರಿ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ದೊಡ್ಡ ಆಸ್ಪತ್ರೆಗಳ ಅಧೀಕ್ಷಕರುಗಳ ಹುದ್ದೆಗಳಿಗೆ ಅನ್ವಯಿಸತಕ್ಕದ್ದಲ್ಲ.

**XXX XXX XXX**

**6. ಸಾರ್ವಜನಿಕ ಹಿತದೃಷ್ಟಿಯಿಂದ ವೈದ್ಯಾಧಿಕಾರಿ ಅಥವಾ ಇತರ ಸಿಬ್ಬಂದಿಯ ವರ್ಗಾವಣೆ.-** (1) ಈ ಅಧಿನಿಯಮವು ಪ್ರಾರಂಭವಾದ ದಿನಾಂಕದಂದು ಸೇವೆಯಲ್ಲಿರುವ ಮತ್ತು ಒಂದು ಪ್ರದೇಶ ಅಥವಾ ವಲಯದಲ್ಲಿಯ ಸರ್ಕಾರಿ ಆಸ್ಪತ್ರೆ ಅಥವಾ ಸರ್ಕಾರಿ ಸಂಸ್ಥೆಯಲ್ಲಿ, ನಿಯಮಿಸಲಾದ ನಿರಂತರ ವರ್ಷಗಳನ್ನು ಪೂರೈಸಿರುವ ವೈದ್ಯಾಧಿಕಾರಿ ಅಥವಾ ಇತರ ಸಿಬ್ಬಂದಿಯನ್ನು ಆ ಪ್ರದೇಶ ಅಥವಾ ಹುದ್ದೆಯಲ್ಲಿ ದೀರ್ಘಾವಧಿ ಸೇವೆ ಸಲ್ಲಿಸಿರುವಂಥ ಮತ್ತು ನಿಯಮಿಸಬಹುದಾದ ಅಂಥ ಇತರ ಮಾನದಂಡಗಳ ಮೇಲೆ ವ್ಯಕ್ತಿಗಳಿಗೆ ಆದ್ಯತೆಯನ್ನು ನೀಡಿ ಕೌನ್ಸಿಲಿಂಗ್ ಪ್ರಕ್ರಿಯೆಯ ಮೂಲಕ, ಈ ಮುಂದಿನ ಕ್ರಮದಲ್ಲಿ, ಎಂದರೆ,-

(1) ಗ್ರಾಮೀಣ ಪ್ರದೇಶ;

(2) ನಗರ ಪ್ರದೇಶ ಮತ್ತು ಅಲ್ಲಿಯ ವಲಯ - ಬಿ;

(3) ನಗರ ಪ್ರದೇಶದಲ್ಲಿಯ ವಲಯ – ಎ,

- ಇವುಗಳಲ್ಲಿಯ, ಮತ್ತೊಂದು ಸರ್ಕಾರಿ ಆಸ್ಪತ್ರೆ ಅಥವಾ ಅದೇ ಪ್ರದೇಶ ಅಥವಾ ವಲಯ ಅಥವಾ ಯಾವುದೇ ಇತರ ಪ್ರದೇಶ ಅಥವಾ ವಲಯ ಸರ್ಕಾರಿ ಸಂಸ್ಥೆಗೆ ವರ್ಗಾವಣೆ ಮಾಡಬಹುದು:

ಪರಂತು, ವರ್ಷಾವಧಿಯಲ್ಲಿ ಅಂಥ ವರ್ಗಾವಣೆಯ ಒಟ್ಟು ಸಂಖ್ಯೆಯು ಅದೇ ವೃಂದದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಂಖ್ಯಾ ಬಲದ ಶೇಕಡಾ ಹದಿನೈದರಷ್ಟನ್ನು ಮೀರತಕ್ಕದ್ದಲ್ಲ.

(2) ಅಮಾನತ್ತಿನಿಂದ ಮರುನೇಮಕಾತಿ ಮಾಡುವಾಗ ವೈದ್ಯಾಧಿಕಾರಿ ಅಥವಾ ಇತರ ಸಿಬ್ಬಂದಿಯನ್ನು, ಅವರು ಅಮಾನತ್ತಿಗಿಂತ ಮೊದಲು ಕಾರ್ಯ ನಿರ್ವಹಿಸುತ್ತಿದ್ದ ಪ್ರದೇಶ ಅಥವಾ ವಲಯಕ್ಕಿಂತ ಉನ್ನತವಾದ ಪ್ರದೇಶ ಅಥವಾ ವಲಯಕ್ಕೆ ನಿಯೋಜಿಸತಕ್ಕದ್ದಲ್ಲ.

**XXX** **XXX** **XXX**

**KARNATAKA LEGISLATIVE ASSEMBLY**

**SIXTEENTH LEGISLATIVE ASSEMBLY**

**SEVENTH SESSION**

# THE KARNATAKA STATE CIVIL SERVICES (REGULATION OF TRANSFER OF MEDICAL OFFICERS AND OTHER STAFF) (AMENDMENT) BILL, 2025

## (LA Bill No. 28 of 2025)

A Bill further to amend the Karnataka State Civil Services (Regulation of transfer of Medical Officers and other Staff) Act, 2011.

Whereas, it is expedient to amend the Karnataka State Civil Services (Regulation of transfer of Medical Officers and other Staff) Act, 2011 (Karnataka Act 2 of 2011) for the purposes hereinafter appearing;

Be it enacted by the Karnataka State Legislature in the seventy-sixth year of the Republic of India as follows:-

**1. Short title and commencement.-** (1) This Act may be called the Karnataka State Civil Services (Regulation of Transfer of Medical Officers and Other Staff) (Amendment) Act, 2025.

(2) It shall deemed to have come into force with effect from the 27$^{th}$ day of May, 2025.

**2. Amendment of section 2.-** In the Karnataka State Civil Services (Regulation of transfer of Medical Officers and other Staff) Act, 2011 (Karnataka Act 2 of 2011) (hereinafter referred to as the principal Act), in section 2,-

(i) the existing clause (a), shall be renumbered as clause (aa);

(ii) before clause (aa), as so renumbered, the following shall be inserted, namely:-

"(a) "administrative posts" means post identified as the District Health and Family Welfare Officer, the District Surgeon, the Principal of Training Institutes, the Joint Director, the Deputy Director, the Programme Officer at the district level and the Superintendent of a major hospital of Health and Family Welfare Services and Deputy Director Ayush and District Health officer Ayush:"

(iii) for clause (c), the following shall be substituted, namely:-

"(c) competent authority" means such authority as may be prescribed who is competent make orders of transfer of a Medical Officer or other staff;

(iv) after clause (c), as so substituted, the following shall be inserted, namely:-

"(cc) "critical vacancy" means such vacancies of posts as may be prescribed";

(v) after clause (f) the following shall be inserted, namely,-

(ff) "Greater Bengaluru area" means the areas falling within the limits of the Greater Bengaluru Authority constituted under the Greater Bengaluru Governance Act, 2024 (Karnataka Act 36 of 2025)";

(vi) in clause (j) after the word "tenure" the words "identified as such by the Government by a notification" , shall be inserted;

(vii) in clause (m), for the words "working as senior specialist" the words "working in senior specialist cadre" shall be substituted ;

(viii) in clause (n), for the word "working as specialist" the words "working in specialist cadre", shall be substituted.;

(ix) after clause (n) the following shall be inserted,- namely:-

"(nn) "Special category of persons" means persons belonging to such special categories as may be specified in the rules." : and

(x) in clause (q), after the words "district headquarters" the words "excluding Greater Bengaluru area" shall be inserted.

**3. Substitution of section 3.-** For section 3 of the principal Act, the following shall be substituted, namely:-

**"3. Transfer or promotion to be through counselling.-** The initial appointment, transfer or promotion of a Medical Officer or other staff under the Act, shall be done through a process of counselling conducted in such manner as may be prescribed:

Provided that, the provisions relating to transfers through process of counselling shall not apply to the posts identified as project posts, and administrative posts.

Provided further that the criteria and the manner of selection and posting for the project and administrative posts shall be as may be prescribed."

**4. Amendment of section 4.-** In section 4 of the Principal Act, for sub-section (2) except the proviso, following shall be substituted, namely: -

"(2) A Medical Officer or other staff who is in service has not served for a prescribed number of years in the rural area shall be transferred to a post in rural area".

**5. Amendment of section 5.-** In section 5 of the Principal Act, for sub-section (2) and the entries relating thereto, the following shall be substituted, namely: -

"(2) Where a specialist or senior specialist who is working in a post which is not identified for the Post Graduate Degree or Post Graduate Diploma specialization shall be transferred to the post identified for the specialised qualification, possessed by him:

Provided that specialist and senior specialist may be posted to the Project posts and administrative posts in such manner as may be prescribed by the Government."

**6. Substitution of section 6.-** For section 6 of the Principal Act, the following shall be substituted, namely:-

**"6. Transfer of Medical Officer or Other Staff in public interest.-** (1) A Medical Officer or other staff who is in service and has completed the prescribed number of years of continuous service, in any Government hospital or Government institution in rural area, Zone -A, B or Greater Bengaluru area may be transferred through process of counselling to another Government hospital or Government Institution in the same area or zone or to any other area or Zone by giving priority to persons put in longer period of service or tenure in that area or post, and considering such criteria or weightage for the area or zone as may be prescribed, in the following order, namely,-

(1)Rural area;

(2) Zone-B in urban area;

(3) Zone-A in urban area; and

(4) Greater Bengaluru area:

Provided that the total number of such transfers during the year shall not exceed "fifteen percent" of the number of the working strength in that cadre.

Provided further that in respect of persons belonging to special categories, the Government may prescribe separate conditions and exceptions for transfers.

Provided also that for persons serving in the Greater Bengaluru area the total continuous service spent by the person in the Greater Bengaluru area on different posts shall be counted for the purpose of the length of the tenure rather than the total continuous service spent by person in the current post.

Provided also that, the vacancies in Greater Bengaluru area shall not be available during counselling to persons eligible to be transferred out from Greater Bengaluru area under sub-section (1).

(2) A Medical Officer or other Staff, on reinstatement from suspension or on being shifted from the current post in lieu of suspension pending Disciplinary enquiry shall be posted any time during the year through counselling by the competent Authority but shall not be posted to a zone higher than his current working zone and may be restricted for posting within an area as specified in the orders of the Disciplinary Authority.

(3) A Medical Officer or other staff may be posted without counselling by the Government any time during a year to fill a critical vacancy:

Provided that, the medical officer or other staff to be posted shall be the senior most out of the list of long-standing persons prepared as per sub-section (1), subject to the exceptions to special categories as specified."

**7. Insertion of new section 7A.-** After section 7 of the Principal Act, the following shall be inserted, namely:-

**"7A. Appeal.-** Any person aggrieved by the orders of the competent authority under the provisions of this Act may make an appeal to the Specified Authority as notified by the Government and the Specified Authority may dispose it off in such manner as may be prescribed."

**8. Repeal and savings.-** (1) The Karnataka State Civil Services (Regulation of transfer of medical officers and other staff) (Amendment) Ordinance, 2025 (Karnataka Ordinance 05 of 2025) is here by repealed.

(2) Notwithstanding such repeal anything done or any action taken under principal Act as amended by the said Ordinance shall be deemed to have been done or taken under the principal Act as amended by this Act.

## STATEMENT OF OBJECTS AND REASONS

It is considered necessary to amend The Karnataka State Civil Service (Regulation of Transfer of Medical Officers and other Staff) Act, 2011to provide for,-

(a) Definitions of the word's critical posts, administrative posts, Greater Bengaluru area, Special category of persons etc., to enable Government to make rules for posting to these posts.

(b) Making rules regarding the manner of posting to project posts and administrative posts.

(c) Omission of certain spent and redundant provision in the Act.

(d) Appeal to the prescribed authority by persons who are aggrieved by the order of the competent authority to make transfer, under this Act.

(e) Certain consequential amendments are also made.

As the matter was urgent and both houses of the state legislature were not in session the Karnataka Civil Services (Regulation of Transfer of Medical Officers and other Staff) (Amendment) Ordinance, 2025 (Karnataka Ordinance 05 of 2025) was promulgated to achieve the above object.

This Bill seeks to replace the said Ordinance.

Hence, the Bill

## FINANCIAL MEMORANDUM

There is no financial implication by the proposed Legislative measure.

## MEMORANDUM REGARDING DELEGATED LEGISLATION

| | |
|---|---|
| **Clause 2:** | (i) Clause (c), of section 2 proposed to be substituted in item (iii), empowers the State Government to prescribe by rules, such authority as competent authority.<br>(ii) Clause (cc), of section 2 proposed to be substituted in item (iv), empowers the State Government to prescribe by rules, such vacancies of posts to be a critical vacancy. |
| **Clause 3:** | Section 3 proposed to be substituted in clause 3,-<br>(i) empowers the State Government to prescribe by rules, such manner through a process of counselling to be conducted.<br>(ii) second proviso, empowers the State Government to prescribe by rules, the criteria and the manner of selection of posting for the project and administrative posts. |
| **Clause 5:** | sub-section (2) of section 5 proposed to be substituted empowers the State Government to prescribe by rules, such manner the specialist and senior specialist may be posted. |
| **Clause 6:** | section 6 proposed to be substituted empowers the State Government to prescribe by rules, such criteria or weightage to be considered for Transfer through counselling. |
| **Clause 7:** | section 7 proposed to be inserted empowers the State Government to prescribe by rules, such manner in the appeal may be disposed by the specified authority. |

The proposed delegation of legislative power is normal in character.

**Dinesh Gundu Rao**
Minister of Health and
Family Welfare Department

**M.K. VISHALAKSHI**
Secretary
Karnataka Legislative Assembly

## EXPLANATORY STATEMENT AS REQUIRED BY SUB-RULE (1) OF RULE 80 OF THE RULES OF PROCEDURE AND CONDUCT OF BUSINESS IN THE KARNATAKA LEGISLATIVE ASSEMBLY.

It is considered necessary to amend The Karnataka state Civil Service (Regulation of Transfer of medical officers and other Staff) Act, 2011to provide for,-

(a) Definitions of the word's critical posts, administrative posts, Greater Bengaluru area, Special category of persons etc., to enable Government to make rules for posting to these posts.

(b) Making rules regarding the manner of posting to project posts and administrative posts.

(c) Omission of certain spent and redundant provision in the Act.

(d) Appeal to the prescribed authority by persons who are aggrieved by the order of the competent authority to make transfer, under this Act.

(e) Certain consequential amendments are also made.

As the matter was urgent and both houses of the state legislature were not in session the Karnataka Civil Services (Regulation of Transfer of medical officers and other Staff) (Amendment) Ordinance, 2025 (Karnataka Ordinance 05 of 2025) was promulgated to achieve the above object. This Bill seeks to replace the said Ordinance.

This Bill seeks to replace the said ordinance.

**ANNEXURE**

**THE EXTRACT OF THE KARNATAKA STATE CIVIL SERVICES (REGULATION OF TRANSFER OF MEDICAL OFFICERS AND OTHER STAFF) ACT, 2011 (KARNATAKA ACT 2 OF 2011)**

**XXX XXX XXX**

**2. Definitions.-** In this Act, unless the context otherwise requires,-

(a) "appointment" means appointment by direct recruitment or Absorption or promotion or by change of cadre of Medical Officer or other staff;
(b) "appointing authority" means the authority competent to make appointment to the respective cadres;
(c) "competent authority" means the authority competent to make Orders of transfer of a Medical Officer or other staff;
(d) "Government" means the Government of Karnataka;

(e) "Government hospital" means and includes district hospital, other major hospital, urban family welfare center, women & child hospital, general hospital at taluk level, community health center, urban primary health center, primary health center, sub center, mobile health unit, mobile tribal unit, maternity centre and AYUSH hospital, institution, centre or any other center by whatever name called and established by the Government belonging to any system of medicine;

(f) "Government Institution" includes a Training center, an Administrative office or any other institution by whatever name called and established by the Government belonging to any system of medicine;

(g) "medical officer" means a medical officer appointed by the Appointing Authority to any of the category of posts specified in Schedule - I;

(h) "other staff' means a person appointed by the Appointing Authority to any of the category of posts specified in Schedule – II;

(i) "process of counseling" means the process of giving opportunity to a person, considered for appointment or transfer, to opt a place or post on priority which is being given based on the length of service put in by him in the place or Zone where he is working and such other criteria as may be prescribed;

(j) "project post" means a post under a project assisted either by a foreign Agency or Government of India, created for a specific objective and for a specific tenure;

(k) "rural area" means the area other than the urban areas;

(l) "schedule" means schedule appended to this Act;

(m) "senior specialist" means a medical officer who has Post Graduate Degree or Post Graduate Diploma qualification and is working as senior specialist;

(n) "specialist" means a medical officer who has Post Graduate Degree or Post Graduate Diploma qualification and is working as specialist;

(o) "transfer" means posting of a Medical Officer or other staff from one place of working to a post in another place of working;

(p) "urban area" means any area situated within the limits of a city corporation, city municipal council, town municipal council, town panchayat or other notified areas specified under the Karnataka Municipal Corporations Act, 1976 or the Karnataka Municipalities Act, 1964 and upto such distance away from the limits of the above area notified as such by the Government from time to time;

(q) "Zone-A" means urban area within the limits of a city corporation or city municipal council at a district headquarters;

(r) "Zone-B" means urban area within the limits of a city municipal council which is in a place other than a district headquarter or a town municipal council or town panchayat and areas notified as urban areas;

**XXX** **XXX** **XXX**

**3. Transfer or promotion to be through counseling.-** The transfer or promotion of a Medical Officer or other staff under this Act, shall be done through a process of counselling conducted in such manner as may be prescribed:

Provided that the provisions relating to transfers through process of counselling shall not apply to the posts identified as project posts, the posts of District Health and Family Welfare Officer, District Surgeon, Principal of Training Institute, Joint Director, Deputy Director, Superintendent of a major hospital of Health and Family Welfare Services and District Ayush Officer and Deputy Director of Ayush Department.

**XXX XXX XXX**

**4. Compulsory appointment of a medical Officer or other staff in rural areas.-** (1) The Appointing Authority or the Competent Authority while making initial appointment or promotion of a Medical Officer or other staff to a Government Hospital or Government Institution shall ensure that vacancies in rural areas are filled in the first instance:

(2) A Medical Officer or other staff who is in service on the date of commencement of this Act and has not served for a prescribed number of years in the rural area before the date of commencement of the Act shall be transferred to a post in rural area:

Provided that the provisions relating to compulsory transfer of Medical Officer or other staff to the rural area shall not apply to a person who has attained the age of fifty years.

(3) If no vacancy is available for initial appointment or promotion, in respect of the post for which compulsory rural service is prescribed, a vacancy may be created by transfer of a Medical Officer or other staff who has completed the prescribed number of years of rural service to another place in Zone B and if no vacancy is available in Zone B a person who has served longer period in Zone B may be transferred to Zone A of urban area.

**XXX XXX XXX**

**5. Compulsory appointment or transfer or promotion of a specialist or senior specialist to appropriate post.-** (1) No Specialist or Senior Specialist with Post Graduate Degree or Diploma shall be posted or transferred to work in a post which is not identified as specialist post related or commensurate to the subject or specialisation in which he possesses Post Graduate Degree or Post Graduate diploma.

(2) Where a specialist or senior specialist who is working in a post which is not identified for the Post Graduate Degree or Post Graduate Diploma specialisation which he possesses on the date of commencement of this Act, he shall be transferred to the post identified for the specialised qualification, possessed by him:

Provided that the provision of this section shall not apply to the posts of District.

Health and Family Welfare Officer, District Surgeon, Principal of Training Institutes, Joint Director, Deputy Director, Programme Officer at the district level and Superintendent of a major hospital of health and family welfare services.

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



**XXX** **XXX** **XXX**

**6. Transfer of Medical Officer or Other Staff in public interest.-** (1) A Medical Officer or other staff who is in service on the date of commencement of this Act and has completed the prescribed number of years of continuous service in any Government hospital or Government Institution in an area or zone may be transferred through process of counselling by giving priority to persons put in longer period of service in that area or post and considering such other criteria as may be prescribed, to another Government hospital or Government Institution in the same area or zone or to any other area or Zone in the following order, namely:-

(1) rural area;

(2) Zone - B in urban area and thereto;

(3) Zone - A in urban area.

Provided that the total number of such transfers during the year shall not exceed fifteen percent of the number of the working strength in that cadre.

(2) A Medical Officer or other staff, on reinstatement from suspension shall not be posted to an area or zone higher than the area or zone, where he was working before suspension.

**XXX** **XXX** **XXX**

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು
THAMMAIAH